ವಿಷಯ : ಮಂಡ್ಯ ಜಿಲ್ಲೆ ಮಠದ ದೊಡ್ಡಿಯಿಂದ ಮಡೇನ ಹಳ್ಳಿ ಸೇತುವೆ ನಿರ್ಮಾಣಕ್ಕೆ ಒತ್ತಾಯ

ಚುಕ್ಕೆ ಗುರ್ತಿಲದ ಪ್ರಶ್ನೆ ಸಂಖ್ಯೆ ನಂ. 168(592)

ಶ್ರೀ. ಕೆ.ಎನ್. ನಾಗೇಗೌಡ (ಕಿರುಗಾವಲು)ಮಾನ್ಯ, ಲೋಕೋಪಯೋಗಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೇ.

ಅ) ಮಂಡ್ಯ ಜಿಲ್ಲೆ ಮಠದದೊಡ್ಡಿಯಿಂದ ಮಡೇನಹಳ್ಳಿ ಸೇತುವೆ ಮಾಡುವುದರಿಂದ 20 ರಿಂದ ನಿರ್ಮಾಣಕ್ಕೆ 25 ಸಲ್ಲಿಗಳ ಜನರಿಗೆ ಸಹಾಯವಾಗುವ ಕಾರಣ ಅದರ ಸರ್ಕಾರದವರು ಪರಿಶೀಲಿಸುವರೆ.

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಇ) ಈ ಸೇತುವೆ ನಿರ್ಮಾಣದ ಕಾರ್ಯವು ಜಿಲ್ಲಾ ಪಂಚಾಯತ್ ವ್ಯಾಪ್ತಿಗೆ ಸೇರಿರುತ್ತದೆ. ಹಾಗೂ ಸೇತುವೆ ನಿರ್ಮಾಣವು ಅಗತ್ಯವಿರುವುದಾಗಿ ಕಂಡು ಬರುತ್ತದೆ. ಈ ಸೇತುವೆ ಕಾಮಗಾರಿ ಸರ್ಕಾರದ ಪರಿಶೀಲನೆಯಲ್ಲಿದೆ.

ಈ) ಹಾಗಿದ್ದಲ್ಲಿ ಈ ಕಾಮಗಾರಿ ಜಿಲ್ಲಾ ಪಂಚಾಯತ್ ವ್ಯಾಪ್ತಿಗೆ ಬರುವುದರಿಂದ, ಈ ಕಾಮಗಾರಿಗೆ ಬೇಕಾಗುವ ಹಣವನ್ನು ಜಿಲ್ಲಾ ಪಂಚಾಯತ್ ಆಯವ್ಯಯದಲ್ಲಿಯೇ ಅಳವಡಿಸಿಕೊಂಡು ಕಾರ್ಯಗತ ಮಾಡಬೇಕಾಗುತ್ತದೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ 1995-96ನೇ ಸಾಲಿನ ಜಿಲ್ಲಾ ಪಂಚಾಯತ್ ಕ್ರಿಯಾ ಯೋಜನೆಯಲ್ಲಿ ಅಳವಡಿಸಿಕೊಳ್ಳುವಂತೆ ನಿರ್ದೇಶನ ನೀಡಲಾಗುವುದು.

ವಿಷಯ : ಹಳ್ಳಿಗಾಡುಗಳ ರಸ್ತೆ ದುರಸ್ತಿಗೆ ಕೈಗೊಂಡ ಕ್ರಮಗಳು

ಚುಕ್ಕೆ ಗುರ್ತಿಲದ ಪ್ರಶ್ನೆ ಸಂಖ್ಯೆ ನಂ. 169(575)

ಮಾನ್ಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ರಾಜ್ಯದಲ್ಲಿ ಹಳ್ಳಿಗಳ ರಸ್ತೆ ಕೆಟ್ಟಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ.

ಆ) ಹಾಗಿದ್ದಲ್ಲಿ ಹಳ್ಳಿಗಾಡಿನ ರಸ್ತೆಯನ್ನು ಸರಿಪಡಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?